ಶ್ರೀ ಎಂ. ಎಸ್. ಕೃಷ್ಣನ್.—ನಿಲುವಳಿ ಸೂಚನೆಯನ್ನು ನೀವು ಕನ್ಸಿಡರ್ ಮಾಡಬೇಕಾಗಿಲ್ಲ. ನಿಜಾಂಶ ಏನೆಂದರೆ, ಒಂದು ಸಮಸ್ಯೆ ಬಂದಿದೆ. ಕೆಲವು ಸಂದರ್ಭಗಳಲ್ಲಿ ಇಂತಹ ಸಮಸ್ಯೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ನಾವು ಕೇಳಿಕೊಳ್ಳುತ್ತೇವೆ, ನೀವು ಮಂತ್ರಿಗಳಿಗೆ ಹೇಳಬೇಕು. ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಬಿನ್ನಿಮಿಲ್ ನೌಕರರು ಪಿಕೆಟಿಂಗ್ ಮಾಡಿದ್ದಾರೆ. ಸಮಸ್ಯೆಗಳು ಗಂಭೀರವಾಗಿದೆ. ಮಂತ್ರಿಗಳು ಹೇಳಿಕೆಯನ್ನು ಕೊಡಲು ತಯಾರಾಗಿದ್ದಾರೆ. ಸಾಯಂಕಾಲದೊಳಗೆ ಯಾವಾಗಲಾದರೂ ಹೇಳಿಕೆಯನ್ನು ಕೊಡಲಿ.

ಅಧ್ಯಕ್ಷರು.—೫ ನಿಲುವಳಿ ಸೂಚನೆಗಳು ಬಂದಿವೆ. ಅವುಗಳ ಬಗ್ಗೆ ನಿಮಗೆ ಯಾವರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಿರ್ಧರಿಸಲು ನಾಳೆ, ನಾಡಿದ್ದು ನಿಮ್ಮನ್ನು ಕರೆಸಿ ಮಾತನಾಡುತ್ತೇನೆ. ಅವರನ್ನೂ ಕರೆಸುತ್ತೇನೆ. ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಇದನ್ನು ನಾನು ರಿಜೆಕ್ಟ್ ಮಾಡಿದ್ದೇನೆಂದು ಹೇಳಿಲ್ಲ. ೫ ನಿಲುವಳಿ ಸೂಚನೆಗಳು ಇರುವುದರಿಂದ ಕಾಲಿಂಗ್ ಅಟೆನ್‌ಷನ್ ಅಥವಾ ನಿಯಮ ೬೮ರ ಪ್ರಕಾರ, ಚರ್ಚೆ ಅಥವಾ ಅರ್ಧ ಗಂಟೆ ಚರ್ಚೆ ಅಥವಾ ಪ್ರಿಲಿಮನರಿ ಸಬ್‌ಮಿಷನ್ ಮಾಡಲು ಯಾವ ರೀತಿ ಅವಕಾಶ ಕೊಡಬೇಕು ಎಂಬುದನ್ನು ನಿರ್ಧಾರ ಮಾಡುತ್ತೇನೆ. ನಿಮ್ಮ ಜೊತೆಯಲ್ಲಿ ಡಿಸ್‌ಕಸ್ ಮಾಡುತ್ತೇವೆ. ಅವರನ್ನೂ ಕರೆದು ಕೂಡ ಡಿಸ್‌ಕಸ್ ಮಾಡುತ್ತೇನೆ. ಈಗ ಬಜೆಟ್ ಮೇಲೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡಲಿ. ಎರಡು ಗಂಟೆಗೆ ಮುಖ್ಯ ಮಂತ್ರಿಗಳ ಉತ್ತರ ಇದೆ. ಆದ್ದರಿಂದ ಅವರು ಈಗ ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಅವರು ಉತ್ತರ ಕೊಡಲು ಸಾಧ್ಯವಿಲ್ಲ. ಅವರು ಕೊಡುವುದಿಲ್ಲ. ನೀವು ವಾಕ್‌ಔಟ್ ಬೇಕಾದರೆ ಮಾಡಿ. ನಾನು ಬೇರೆಯವರಿಗೆ ಯಾರಿಗೂ ಅವಕಾಶ ಕೊಡುವುದಿಲ್ಲ.

(ಶ್ರೀ ಆರ್. ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೪–೮೫ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಅಧ್ಯಕ್ಷರೆ, ನಾನು ೧೯೮೪–೮೫ನೇ ಸಾಲಿನ ಬಜೆಟ್ ಮೇಲೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಮುಖ್ಯವಾಗಿ ನಾವು ಹೊಸ ಮುಖ್ಯ ಮಂತ್ರಿಗಳು ಬಂದಮೇಲೆ ಅವರು ಏನಾದರೂ ಹೊಸ ಯೋಜನೆಗಳನ್ನು, ಹಾಗೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ಭಾವನೆಯನ್ನು ಇಟ್ಟು ಕೊಂಡಿದ್ದೆವು. ಆದರೆ ಈ ಬಜೆಟ್ ಭಾಷಣವನ್ನು ನೋಡಿದ ಮೇಲೆ, ನಾವು ಏನು ತಿಳಿದು ಕೊಂಡಿದ್ದೆವು ಆ ರೀತಿ ಇವರು ಮಾಡಿಲ್ಲ. ಇದು ಯಾವ ಪ್ರಕಾರವಾಗಿ ನಡೆದಿದೆ ಎಂದರೆ ೧೯೮೩ರಿಂದ ನಡೆದುಕೊಂಡು ಬಂದಂತಹ ಪದ್ಧತಿಯಲ್ಲಿಯೇ ಈ ಬಜೆಟ್ ಇದೆ. ೧೯೮೩ ರಿಂದ ಏನು ಒಂದು ಪದ್ಧತಿಯನ್ನು ಇವರು ಆನುಸರಿಸುತ್ತಿದ್ದಾರೆಂದರೆ, ಈ ಬಜೆಟ್‌ನಲ್ಲಿ ಕನಿಷ್ಟ ಪಕ್ಷ ೧೨–೧೩ ಪುಟಗಳನ್ನು ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವ ಉದ್ದೇಶದಿಂದ ಪ್ರಿಂಟ್ ಮಾಡಂತ್ತಿದ್ದಾರೆ. ೧೯೮೩ರ ಹಿಂದೆ ಏನು ನಡೆದಿದೆ ಅಂದರೆ ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಹಣಕಾಸು ಸಚಿವರಾಗಿದ್ದಾಗ, ಯಾವ ರೀತಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ಎಷ್ಟು ಪುಟ ಅವರ ಭಾಷಣದಲ್ಲಿ ರಿಜರ್ವ್ ಮಾಡುತ್ತಿದ್ದರು ಎಂಬುದನ್ನು ನಾನು ನೋಡಿದ್ದೇನೆ. ಹಿಂದೆ ಅವರು ಈ ರೀತಿಯಾಗಿ ೧೦–೧೨ ಪುಟಗಳನ್ನು ಕೇಂದ್ರ ಸರ್ಕಾರವನ್ನು ದೂಷಿಸಲು ಉಪಯೋಗ ಮಾಡಿಲ್ಲ. ಈಗ ೧೯೮೩ರ ನಂತರ ಏನು ಮಾಡುತ್ತಿದ್ದಾರೆಂದರೆ ಕೇಂದ್ರ ಸರ್ಕಾರದವರು ಅದು ಕೊಟ್ಟಿಲ್ಲ. ಸರ್ಕಾರಿಯ ಕಮಿಷನ್ ಪ್ರಕಾರ ನಮಗೆ ಸಿಕ್ಕಬೇಕಾಗಿರುವುದು ಸಿಕ್ಕಿಲ್ಲ. ನಮಗೆ ಸಾಧ್ಯವಾದಷ್ಟು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.